ಯನ್ನು ೩೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕೆಂದು ಈ ಹಿಂದೆ ಅನೇಕ ಬಾರಿ ಬೇಡಿಕೆ ಸಲ್ಲಿಸಿರುತ್ತೇವೆ. ಈ ರೀತಿ ಮಾಡುವುದರಿಂದ ನನ್ನ ಕ್ಷೇತ್ರದ ಜನತೆಗೆ ಅನುಕೂಲವಾಗುವುದು. ಆದುದರಿಂದ ಸರ್ಕಾರವು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಕೋರುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಳಳ ತಾಲ್ಲೂಕು ಕೇಂದ್ರಗಳಲ್ಲಿ ೩೦ ಅಥವಾ ೪೦ ಹಾಸಿಗೆಗಳುಳ್ಳ ಜನರಲ್ ಆಸ್ಪತ್ರೆಗಳನ್ನು ಮಾಡಬೇಕಾಗಿದೆ. ಈಗಾಗಲೇ ೩-೪ ತಾಲ್ಲೂಕುಗಳಲ್ಲಿ ಆಸ್ಪತ್ರೆಯನ್ನು ಒದಗಿಸಲು ಹಣವನ್ನು ಒದಗಿಸಿದ್ದೇವೆ, ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದಿರುವುದರಿಂದ ಮುಂದೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಎಲ್ಲ ಕಡೆಗಳಲ್ಲೂ ಜನರಲ್ ಆಸ್ಪತ್ರೆಗಳನ್ನು ಮಾಡಲು ಪ್ರಯತ್ನ ಮಾಡುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳಿಂದ ಈ ವಿಚಾರದಲ್ಲಿ ವರದಿಯನ್ನು ತರಿಸಿಕೊಂಡು ಆದಷ್ಟು ಬೇಗ ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

viii) ಜೋಗದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಧೀನದಲ್ಲಿರುವ ಮಹಾತ್ಮಾ ಗಾಂಧಿ ಜಲ ವಿದ್ಯುತ್ ಆಗರದಲ್ಲಿ ಕಾರ್ಮಿಕರ ಕೊರತೆಯ ಬಗ್ಗೆ.

ಶ್ರೀ ಬಿ. ಧರ್ಮಪ್ಪ.— ಮಾನ್ಯ ಅಧ್ಯಕ್ಷರೇ, ಜೋಗದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಧೀನದಲ್ಲಿರುವ ಮಹಾತ್ಮಾ ಗಾಂಧಿ ಜಲ ವಿದ್ಯುತ್ ಆಗರದಲ್ಲಿ ಕಾರ್ಮಿಕರ ಕೊರತೆಯಿಂದ ಮತ್ತು ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಸಂಭವಿಸಿದೆಯಲ್ಲದೆ ರಾಜ್ಯದಲ್ಲಿ ವಿದ್ಯುತ್ ಕ್ಷಾಮ ಸಾಕಷ್ಟಿರುವಾಗಲೇ ಈ ಕಾರ್ಯಾಗಾರ ನಡೆಯುತ್ತಿರುವ ವೈಖರಿಯಿಂದ ಪರಿಸ್ಥಿತಿಯ ವಿಷಮತೆಗೆ ಕಾರಣವಾಗಿದೆ ಎಂದು ತಿಳಿದಿದೆ. ಈ ಬಗ್ಗೆ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಜಿ. ದೇಶಪ್ರಮುಖ್ (ಮಾನ್ಯ ವಿದ್ಯುಚ್ಛಕ್ತಿ ಖಾತೆ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕ ವಿಚಾರಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಈಗ ವಿವರ ಇಲ್ಲ, ನಂತರ ಅವರಿಗೆ ಆದಷ್ಟು ಬೇಗ ಉತ್ತರವನ್ನು ಕಳುಹಿಸಿಕೊಡುತ್ತೇನೆ.

IX) ಗುಲ್ಬರ್ಗಾ ನಗರದ ಎಂ.ಎಸ್.ಕೆ. ಮಿಲ್ಸ್ ರಸ್ತೆಯಲ್ಲಿ ಮಧ್ಯಮ ವರ್ಗದವರಿಗಾಗಿ ಮನೆಗಳನ್ನು ಕಟ್ಟಿಸಿ ಕೊಡುವ ಬಗ್ಗೆ.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ).— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರಕ್ಕೆ ಸೇರಿದಂತೆ ಎಂ.ಎಸ್.ಕೆ. ಮಿಲ್ಸ್ ರಸ್ತೆಯಲ್ಲಿರುವ ಮಧ್ಯಮ ಆದಾಯದವರಿಗಾಗಿ ನಿರ್ಮಿಸಿದ್ದ ಮನೆಗಳನ್ನು ಗೃಹ ನಿರ್ಮಾಣ ಮಂಡಲಿಯವರು ೧೯೮೨ನೇ ಇಸವಿ ಜೂನ್ ತಿಂಗಳಲ್ಲಿ ಹಂಚಿಕೆ ಮಾಡಿದ್ದು ೪೨,೦೦೦ ರೂಪಾಯಿಗಳನ್ನು ಮನೆಯ ಬೆಲೆಯೆಂದು ನಿಗದಿ ಮಾಡಲಾಗಿದ್ದಿತು. ಸದರಿ ಮನೆಗಳನ್ನು ಪಡೆದುಕೊಂಡವರು ಮೇಲ್ಕಂಡ ಬೆಲೆಯ ಕಾಲು ಭಾಗದಷ್ಟು ಹಣವನ್ನು ಗೃಹ ನಿರ್ಮಾಣ ಮಂಡಲಿಗೆ ತುಂಬಬೇಕೆಂದು ಆದೇಶ ನೀಡಲಾಗಿದ್ದಿತು. ಅಂತೆಯೇ ಎಲ್ಲರೂ ಕಾಲು ಭಾಗವಾದ ೧೦,೫೦೦ ರೂಪಾಯಿಗಳನ್ನು ತುಂಬಿದರು. ಆದರೂ ಸದರೀ ಮನೆಗಳನ್ನು ಹಂಚಿಕೆದಾರರು ಸುಬರ್ದಿಗೆ ಬಿಟ್ಟು ಕೊಡಲಿಲ್ಲ. ಈ ಬಗ್ಗೆ ಮನೆಗಳನ್ನು ಪಡೆದುಕೊಂಡವರು ಗೃಹ ನಿರ್ಮಾಣ ಮಂಡಲಿಯವರನ್ನು ಒತ್ತಾಯಿಸಿರುತ್ತಾ ಬಂದಿದ್ದಾರೆ ಆದರೂ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಇತ್ತೀಚೆಗೆ ಸದರಿ ಮನೆಗಳ ಬೆಲೆಯನ್ನು ಯಾವ ಕಾರಣದಿಂದಲೋ ೪೨,೦೦೦ ರೂಪಾಯಿಗಳಿಂದ ೭೧ ಸಾವಿರ ರೂಪಾಯಿಗಳಿಗೆ ಹೆಚ್ಚಿಸಿ ಪುನಃ ೩೬,೦೦೦ ರೂಪಾಯಿಗಳನ್ನು ಕೂಡಲೇ ಕಟ್ಟಬೇಕೆಂದೂ ತಪ್ಪಿದಲ್ಲಿ ಹಂಚಿಕೆಯನ್ನು ರದ್ದು ಪಡಿಸುವುದಾಗಿಯೂ ಗೃಹ ನಿರ್ಮಾಣ ಮಂಡಲಿಯವರು ನೋಟೀಸು ಕೊಟ್ಟಿರುತ್ತಾರೆ. ಇದರಿಂದ ಹಂಚಿಕೆದಾರರಿಗೆ ತುಂಬಾ ತೊಂದರೆ ಹಾಗೂ ಅನ್ಯಾಯವಾಗಿದೆ. ಆಗಲೇ ಮೇಲ್ಕಂಡ ಮನೆಗಳನ್ನು ಹಂಚಿಕೆದಾರರ ಸುಪರ್ದಿಗೆ ಕೊಟ್ಟಿದ್ದಿದ್ದಲ್ಲಿ ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ ಇದಕ್ಕೆ ಗೃಹನಿರ್ಮಾಣ ಮಂಡಳಿಯವರೇ ಹೊಣೆಯಾಗಿರುವುದರಿಂದ ಸರ್ಕಾರದವರು ಕೂಡಲೇ ಕ್ರಮ ಕೈಗೊಂಡು ಸದರೀ ಆಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಗೃಹ ನಿರ್ಮಾಣ ಮಂಡಲಿಗೆ ಆದೇಶ ನೀಡಿ ಕೂಡಲೇ ಮನೆಗಳನ್ನು ಆಯಾಯಾ ಹಂಚಿಕೆದಾರರಿಗೆ ಅವರ ಸುಪರ್ದಿಗೆ ಕೊಡಬೇಕೆಂದು ಸರ್ಕಾರದವರನ್ನು ಒತ್ತಾಯಿಸುತ್ತೇನೆ.